ಇವು ವಿಜೃಂಭಿಸುತ್ತವೆ. ಈ ಆತಂಕ ಯೂರೋಪಿನಂತಹ ಮುಂದುವರಿದ ದೇಶಗಳಲ್ಲೂ, ಅಮೆರಿಕೆಯಲ್ಲೂ ಕಾಣಿಸಿಕೊಂಡಿದೆ. ನಮ್ಮಲ್ಲೂ ವಿಶ್ವವಿದ್ಯಾಲಯಗಳು, ಅಲ್ಲಿನ ಹುದ್ದೆಗಳು, ಪದವಿಗಳು ಎಲ್ಲವೂ ಅರ್ಥಹೀನವಾಗಿರುವ ಸ್ಥಿತಿ ಎಲ್ಲರ ಅನುಭವಕ್ಕೂ ಬರುತ್ತಿದೆ. ಇಡೀ ಶಿಕ್ಷಣಕ್ರಮವು ಬಂಡವಾಳಶಾಹಿಗಳಿಗೆ ನೌಕರರನ್ನು ಒದಗಿಸುವ, ಅವರು ಉತ್ಪಾದಿಸುವ ವಸ್ತುಗಳಿಗೆ ಗ್ರಾಹಕರನ್ನು ಸೃಷ್ಟಿಸುವ ಕೆಲಸಕ್ಕೆ ಕಂಕಣತೊಟ್ಟು ನಿಂತಿರುವ ಹಾಗಿದೆ. ಆದರೂ ಶಿಕ್ಷಣ ಯಾವತ್ತೂ ಅನಿರೀಕ್ಷಿತ ಫಲಿತಾಂಶಗಳನ್ನೇ ಕೊಡುತ್ತದೆ. ಮೆಕಾಲೆಯ ದೃಷ್ಟಿಯಿಂದ ರೂಪುಗೊಂಡ ನಮ್ಮ ದೇಶದ ಆಧುನಿಕ ಶಿಕ್ಷಣ ಆತನ ಅಪೇಕ್ಷೆಗಿಂತ ತೀರ ಭಿನ್ನವಾದ ಫಲಿತಾಂಶವನ್ನೇ ನೀಡಿದೆ ಅಲ್ಲವೇ? ಇಂದಿನ ದುಸ್ಥಿತಿಯಲ್ಲೂ ಅರಿವುಳ್ಳ, ಬದುಕಿನ ರೀತಿಯ ಬಗ್ಗೆ ಎಚ್ಚರವುಳ್ಳ ಕ್ರಿಯಾಶೀಲರು ಬರುತ್ತಾರೆ, ಬರಲಿ ಎಂದು ಹಾರೈಸೋಣ.

**◆ ಕುವೆಂಪು ಅವರು 'ಸ್ಮಶಾನ ಕುರುಕ್ಷೇತ್ರ'ದಲ್ಲಿ ಹೇಳುತ್ತಾರಲ್ಲ 'ನಾಶದಲಿ ನವಸೃಷ್ಟಿ ಪವಡಿಸಿದೆ' ಅಂತ, ಹಾಗೆ ಅಲ್ಲವೆ?**

ಹೌದು. ಸತ್ತವರನ್ನು, ಸಾಯಿಸಿದವರನ್ನು ಹೂತ, ಹೂಳುವ ಸ್ಮಶಾನವಾಗದ ಒಂದಿಂಚು ಜಾಗವೂ ಇಲ್ಲ; ಹೂವು ಅರಳದ, ಸತ್ತವರನ್ನು 'ನೋಡಿಕೊಳ್ಳುತ್ತ' ಬದುಕು ಕಟ್ಟಿಕೊಳ್ಳಲು ನೆರವಾಗದ ಸ್ಮಶಾನವು ಎಲ್ಲಿಯೂ ಇಲ್ಲ. ಕುರುಕ್ಷೇತ್ರ ಯುದ್ಧ ನಡೆಯದ ವ್ಯಕ್ತಿಯ ಮನಸು, ಸಮುದಾಯ, ದೇಶಗಳೂ ಇಲ್ಲ. 'ಮನುಷ್ಯ ಸ್ಕೌಂಡ್ರಲ್, ಎಂಥಾ ಸ್ಥಿತಿಯಲ್ಲೂ ಬದುಕುತ್ತಾನೆ' ಎಂದು ಹೇಳಿದ ದಾಸ್ತಾವ್ ಸ್ಕಿ ಮತ್ತೆ ಚಿಗುರುವ ಸಾಧ್ಯತೆಯನ್ನು ತೋರಿದ ಟಾಲ್ಸ್ಟಾಯ್, 'ಉತ್ತಮ ಪ್ರಭುತ್ವವೆಂಬೋದು ಲೊಳಲೊಟ್ಟೆ' ಅಂದವರೂ, ಒಂದೊಂದು ಹಳ್ಳಿಯೂ ಸ್ವರಾಜ್ಯವಾಗಬೇಕೆಂದು ಕನಸು ಕಂಡವರೂ ಇದ್ದಾರೆ. ನಮ್ಮ ನಾಳೆ ಹೇಗಿರಬೇಕೆಂದು ಬಯಸುತ್ತೇವೋ, ಆ ಬಯಕೆ ನಮ್ಮ ಇಂದಿನ ಕೆಲಸಗಳಿಗೆ ಕಾರಣ ಎಂದು ತಿಳಿಯೋಣ. ಬಯಕೆ ಸ್ವಸ್ಥವಾಗಿರಲಿ ಎಂದು ಹಾರೈಸೋಣ.



**◆ ಒಂದು ಪಠ್ಯಕ್ಕೆ ಮುಖಾಮುಖಿಯಾದೊಡನೆ 'ಲಿಟರಾಲಿಟಿ ಆಫ್ ಇಮ್ಯಾಜಿನೇಷನ್'ನ ಕೊರತೆ ಬರಹಗಳಲ್ಲಿದೆ ಎಂದು ಓದುಗನ ಅರಿವಿಗೆ ಬರುತ್ತದೆ. ಈ ಕಾಲದಲ್ಲಿ ಪಠ್ಯದ ನಿಕಟವಾದ ಓದನ್ನು ಕಡಿಮೆ ಮಾಡಲು ಇದೂ ಒಂದು ಕಾರಣವೇ ?**

ಲಿಟರಾಲಿಟಿ ಆಫ್ ಇಮ್ಯಾಜಿನೇಷನ್ ಕಲ್ಪನಾ ಶಕ್ತಿಯನ್ನು ಆಧಾರವಾಗಿಟ್ಟುಕೊಂಡು ವಾಸ್ತವವನ್ನು ಗ್ರಹಿಸುವ, ವ್ಯಕ್ತಪಡಿಸುವ ಕೆಲಸ ಅಂತ ಸ್ಥೂಲವಾಗಿ ವಿವರಿಸಬಹುದು. ಕಲ್ಪನೆ- ಭ್ರಮೆ, ವಾಸ್ತವ- ಸಾಹಿತ್ಯ ಸೃಷ್ಟಿ ಇಂಥ ಸಂಬಂಧಗಳನ್ನು ಗ್ರಹಿಸುವ ಲೇಖಕರು ಯಾವುದೇ ಭಾಷೆಯಲ್ಲೂ ಕಡಿಮೆಯೇ. ಹಾಗೆ ಗಹನವಾದ, ನಿಕಟವಾದ ಓದನ್ನು ಬಯಸುವ ಕೃತಿಗಳೂ ಕಡಿಮೆಯೇ ಇರುತ್ತವೆ. ಸಮರ್ಥ ಓದುಗರಿಗೆ ಕೃತಿಯೊಂದನ್ನು ಹೇಗೆ ಓದಬೇಕೆಂದು ಕೆಲವೇ ಕ್ಷಣಗಳಲ್ಲಿ ತಿಳಿಯುತ್ತದೆ. ಅಲ್ಲವೇ?

ನೀವು 'ನಿಕಟ ಓದು' ಎಂದು ಕರೆಯುತ್ತೀರಲ್ಲ, ಅದು ಬದುಕಿಗೂ ಅಗತ್ಯ. ಕೃತಿಯೊಂದರ 'ನಿಕಟ ಓದು' ಇರದಿದ್ದರೆ ನಾವು ಮಾಡುವ ವಿಮರ್ಶೆ ಉಸುಕಿನಲ್ಲಿ ಕಟ್ಟಿದ

ಕೃತಿ ಅನ್ನುವುದು ಅಚ್ಚಾದ ಪುಸ್ತಕವಲ್ಲ. ಓದುಗ ಮನಸ್ಸು ಪ್ರತಿ ಓದಿನಲ್ಲೂ ಸೃಷ್ಟಿಮಾಡಿಕೊಳ್ಳುವ ಜೀವಂತ ವಸ್ತು.